ವಿಜಯವಾಣಿ
ಕನ್ನಡಿಗರ ಧ್ವನಿ

**Thursday 14th February 2019, Page No.17**

**The legislature approved for the R.V. University**

# ಏಳು ನಿಮಿಷದಲ್ಲಿ ಎಂಟು ವಿಧೇಯಕಗಳಿಗೆ ಒಪ್ಪಿಗೆ

**ಬೆಂಗಳೂರು:** ರಾಜ್ಯ ರಾಜಕೀಯ ಪ್ರಹಸನದಲ್ಲಿ ಗಂಭೀರ ವಿಚಾರವುಳ್ಳ ವಿಧೇಯಕ ಸೇರಿ ಎಂಟು ವಿಧೇಯಕಗಳು ಕೇವಲ ಏಳು ನಿಮಿಷದಲ್ಲಿ ಶಾಸನಸಭೆಯಲ್ಲಿ ಅಂಗೀಕಾರ ಗೊಂಡಿದೆ. ವಿಧಾನಸಭೆಯಲ್ಲಿ ಬುಧವಾರ ಪ್ರತಿಪಕ್ಷ ಧರಣಿಯಲ್ಲಿದ್ದಾಗಲೇ ಸರ್ಕಾರ ವಿಧೇಯಕಗಳನ್ನು ಕ್ಷಣ ಮಾತ್ರದಲ್ಲಿ ಮಂಡಿಸಿ ಒಪ್ಪಿಗೆ ಪಡೆದುಕೊಂಡು ಬೀಗಿತು.

ಮಧ್ಯಾಹ್ನ 12.40ರಿಂದ 12.47ರ ಅವಧಿಯಲ್ಲಿ ಈ ವಿಧೇಯಕಗಳು ಅನುಮೋದನೆಗೊಂಡವು. ಬಸವಕಲ್ಯಾಣ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ, ಎನ್‌ಐಇ ವಿಶ್ವವಿದ್ಯಾಲಯ ವಿಧೇಯಕ, ಆದಿಚುಂಚನಗಿರಿ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, ಭೂ ಸ್ವಾಧೀನ, ಪುನರ್ವಸತಿ ಮತ್ತು ಪುನರ್ ವ್ಯವಸ್ಥೆಯಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು (ಕರ್ನಾಟಕ ತಿದ್ದುಪಡಿ) ವಿಧೇಯಕ, ಕರ್ನಾಟಕ ಋಣ ಪರಿಹಾರ ವಿಧೇಯಕ, ಆರ್.ವಿ.ವಿಶ್ವವಿದ್ಯಾಲಯ ವಿಧೇಯಕ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ- 2018 ಅನ್ನು ಶಾಸನ ಸಭೆ ಚರ್ಚೆ ರಹಿತವಾಗಿ ಒಪ್ಪಿ ಅನುಮೋದನೆ ನೀಡಿತು. ಶಿಕ್ಷಕರ ವರ್ಗಾವಣೆ ಕುರಿತ ವಿಧೇಯಕದ ವಿಚಾರದಲ್ಲಿ ಅನೇಕ ಗೊಂದಲಗಳಿದ್ದು, ಚರ್ಚೆ ರಹಿತವಾಗಿ ಶಾಸನ ಸಭೆಯ ಒಪ್ಪಿಗೆ ಪಡೆದುಕೊಳ್ಳಲಾಗಿದೆ ಎಂಬ ಮಾತುಗಳು ಕೇಳಿಬಂದಿದೆ.

